**NOVEMBER 17,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಗದಗ ಜಿಲ್ಲೆ, ಲಕ್ಕುಂಡಿಯ ಐತಿಹಾಸಿಕ ಸ್ಮಾರಕಗಳನ್ನು,** ವಿಶ್ವ ಸಂಸ್ಥೆಯ, ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರಿಸಲು, ರಾಜ್ಯ ಪ್ರವಾಸೋದ್ಯಮ ಇಲಾಖೆಯಿಂದ, ವಿವರವಾದ ಪ್ರಸ್ತಾವ ಸಿದ್ಧ ಪಡಿಸಲಾಗುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ, ತಿಳಿಸಿದ್ದಾರೆ. ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ, ಲಕ್ಕುಂಡಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸಿ, ಅವರು ಮಾತನಾಡಿದರು.ಲಕ್ಕುಂಡಿಯಲ್ಲಿ ಹಲವೆಡೆ ಚದುರಿಕೊಂಡಿರುವ ಐತಿಹಾಸಿಕ ಶಿಲ್ಪ, ಶಾಸನಗಳು, ನಾಣ್ಯಗಳು, ಗುಡಿಗಳು ಹಾಗೂ ಪಾರಂಪರಿಕ ಬಾವಿಗಳನ್ನು, ಸಂರಕ್ಷಿಸಲು ಸಮುದಾಯದ ಸಹಭಾಗಿತ್ವದಲ್ಲಿ ಯೋಜಿಸಲಾಗುತ್ತಿದೆ ಎಂದರು. ಬರುವ 22 ರಿಂದ 24ರ ವರೆಗೆ, ಲಕ್ಕುಂಡಿಯಲ್ಲಿ ಪ್ರಾಚ್ಯವಸ್ತು ಅವಶೇಷಗಳನ್ನು ಸಂಗ್ರಹಿಸುವ ಅಭಿಯಾನ ಜರುಗಲಿದೆ ಎಂದು, ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ ಸಭೆಗೆ ತಿಳಿಸಿದರು. ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಕೆ.ವಿ ರಾಜೇಂದ್ರ, ಪಾಲ್ಗೊಂಡಿದ್ದರು.

<><><>

**ಮಂಡ್ಯದಲ್ಲಿ ಆಯೋಜಿತ,** 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು, ಪ್ರತಿನಿಧಿಗಳ ನೋಂದಣಿಗೆ, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಚಾಲನೆ ನೀಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಜಾಲತಾಣದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವ ಹೊಂದಿದವರು, ಹೆಸರು ನೊಂದಾಯಿಸಲು, 20 ದಿನಗಳ ಕಾಲಾವಕಾಶವಿದೆ. ಬರುವ, ಡಿಸೆಂಬರ್ 20 ರಿಂದ 22ರ ವರೆಗೆ ನಡೆಯಲಿರುವ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ, ರಾಜ್ಯ ಸರ್ಕಾರ, 25 ಕೋಟಿ ರೂಪಾಯಿ ಅನುದಾನ ಬಿಡುಗಡೆಗೆ, ಮಂಜೂರಾತಿ ನೀಡಿದೆ. ಸಮ್ಮೇಳನಕ್ಕೆ 30 ಕೋಟಿ ರೂಪಾಯಿ ಬಿಡುಗಡೆ ಮಾಡುವಂತೆ, ಮಂಡ್ಯ ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ, ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

<><><>

**ರಾಜ್ಯ ಜಾನಪದ ಪರಿಷತ್ತಿನ,** ನಾಡೋಜ ಎಚ್.ಎಲ್ ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿಗೆ, ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕಿನ, ಹೊಸೂರಿನ ಕಿನ್ನರಿ ಜೋಗಿ ಕಲಾವಿದ ಕೆ.ಗುಡ್ಡಪ್ಪ ಜೋಗಿ ಅವರನ್ನು ಆಯ್ಕೆ ಮಾಡಿದೆ. ಪ್ರಶಸ್ತಿ 1 ಲಕ್ಷ ರೂಪಾಯಿ ನಗದು ಹಾಗೂ ಫಲಕ ಒಳಗೊಂಡಿದೆ. 'ಕಿನ್ನರಿ ಜೋಗಿ ಮೇಳ' ಕಥಾ ಪರಂಪರೆ ಕಲಾವಿದ, 72 ವರ್ಷದ ಗುಡ್ಡಪ್ಪ ಅವರು, ತಮ್ಮ 12ನೇ ವಯಸ್ಸಿನಿಂದಲೇ ಈ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ ಹಾಗೂ ಜಾನಪದ ಪರಿಷತ್ತಿನ ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ ಸಹ ಅವರಿಗೆ ಸಂದಿವೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ, ಬರುವ 22 ನೇ ತಾರೀಖು, ಬೆಳಗ್ಗೆ 10.30ಕ್ಕೆ ಆಯೋಜಿತ ಸಮಾರಂಭದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು, ಪರಿಷತ್ತಿನ ಅಧ್ಯಕ್ಷ  ಹಿ.ಚಿ ಬೋರಲಿಂಗಯ್ಯ ತಿಳಿಸಿದ್ದಾರೆ.

<><><>

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** 2023, 2024ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ, 2022 ಮತ್ತು 2023 ನೇ ಸಾಲಿನ, ಪುಸ್ತಕ ಬಹುಮಾನ ಪ್ರಕಟಿಸಿದೆ. ವಸುಧೇಂದ್ರ ಅವರ, 'ತೇಜೋ ತುಂಗಭದ್ರಾ' ಕೃತಿಯ ಇಂಗ್ಲಿಷ್ ಅನುವಾದಿತ ಪುಸ್ತಕ ಸೇರಿ, ಒಟ್ಟು 10 ಕೃತಿಗಳನ್ನು, ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.  2023ನೇ ಸಾಲಿನ ಗೌರವ ಪ್ರಶಸ್ತಿಗೆ ಎಚ್.ಎಸ್ ರಾಘವೇಂದ್ರ ರಾವ್, ವಿನಯ ಚೈತನ್ಯ, ನಟರಾಜ ಹುಳಿಯಾರ, ದು.ಸರಸ್ವತಿ ಹಾಗೂ ಎಚ್.ಎಂ ಕುಮಾರಸ್ವಾಮಿ ಆಯ್ಕೆಯಾಗಿದ್ದಾರೆ. 2024 ನೇ ಸಾಲಿಗೆ ಆರ್.ಕೆ ಕುಲಕರ್ಣಿ, ಕರೀಗೌಡ ಬೀಚನಹಳ್ಳಿ, ರಾಜೇಂದ್ರ ಚೆನ್ನಿ, ಬೋಡೆ ರಿಯಾಜ್ ಅಹ್ಮದ್ ಹಾಗೂ ಬಸು ಬೇವಿನಗಿಡದ ಭಾಜನರಾಗಿದ್ದಾರೆ. ಪ್ರಶಸ್ತಿಯು 50 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ ಎಂದು, ಪ್ರಕಟಣೆ ತಿಳಿಸಿದೆ.

<><><>

**ಆಧುನಿಕ ಜಗತ್ತಿನ, ಒತ್ತಡದ ಬದುಕಿನಿಂದ ಹೊರಬಂದು,** ನೆಮ್ಮದಿ ಅರಸಲು, ಸಂಗೀತ ಪರಿಣಾಮಕಾರಿ ಸಾಧನವಾಗಿದೆ ಎಂದು, ಕೇಂದ್ರ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ. ಹುಬ್ಬಳ್ಳಿಯ ದೇಶಪಾಂಡೆ ನಗರದ, ಸವಾಯಿ ಗಂಧರ್ವ ಸಭಾ ಭವನದಲ್ಲಿ ಆಯೋಜಿಸಲಾಗಿದ್ದ, ಪಂಡಿತ ಅರ್ಜುನಸಾ ನಾಕೋಡ ರಾಷ್ಟ್ರೀಯ ಸಂಗೀತ ಮಹೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಧಾರವಾಡ ನೆಲಕ್ಕೆ ಅಪರಿಮಿತ ಶಕ್ತಿ ಇದೆ. ಅನೇಕ ಕಲಾವಿದರು, ತಮ್ಮ ಸಾಧನೆಯ ಮೂಲಕ, ಜಾಗತಿಕ ಮನ್ನಣೆಯನ್ನು ದೊರಕಿಸಿಕೊಟ್ಟಿದ್ದಾರೆ. ಪಂಡಿತ ಸವಾಯಿ ಗಂಧರ್ವರು, ಪಂಡಿತ ಭೀಮಸೇನ ಜೋಶಿ, ಪಂಡಿತ ಮಲ್ಲಿಕಾರ್ಜುನ ಮನ್ಸೂರ, ವಿದುಷಿ ಗಂಗೂಬಾಯಿ ಹಾನಗಲ್ ಸೇರಿದಂತೆ, ದೊಡ್ಡದೊಂದು ಧಾರವಾಡ ಘರಾಣೆಯ ಸಂಗೀತ ಪರಂಪರೆಯನ್ನು, ಯುವ ಕಲಾವಿದರಿಗೆ ಬಳುವಳಿಯಾಗಿ ನೀಡಿದ್ದಾರೆ ಎಂದರು.ಕಾರ್ಯಕ್ರಮದಲ್ಲಿ ವಿಭಾ ಹೆಗಡೆ, ಉಸ್ತಾದ್ ರಫೀಖ ಖಾನ್ ಮತ್ತು ಶಫೀಕ್ ಖಾನ್, ಪಂಡಿತ ಜಯತೀರ್ಥ ಮೇವುಂಡಿ ಅವರ ಸಂಗೀತ ಕಛೇರಿಗಳು, ಮನ ಸೆಳೆದವು.

<><><>

**ಸಹಕಾರಿ ಆಂದೋಲನ,** ಜನ ಸಹಭಾಗಿತ್ವದಿಂದ ಬಲಗೊಂಡು, ಜನ ಸಾಮಾನ್ಯರ ಆಂದೋಲನವಾಗಿ ಪರಿವರ್ತಿತವಾಗಬೇಕು ಎಂದು, ಸಹಕಾರ ಖಾತೆ ಸಚಿವ ಕೆ.ಎನ್. ರಾಜಣ್ಣ ಆಶಿಸಿದ್ದಾರೆ.ಮಂಗಳೂರಿನಲ್ಲಿ ಜರುಗಿದ, 71ನೇ ಅಖಿಲ ಭಾರತ ಸಹಕಾರ ಸಪ್ತಾಹಕ್ಕೆ, ಚಾಲನೆ ನೀಡಿ, ಅವರು, ಮಾತನಾಡಿದರು. ಸಹಕಾರಿ ಸಂಸ್ಥೆಗಳು ಜಾತಿ, ಮತ, ಪಕ್ಷಗಳಿಂದ ದೂರವಿದ್ದು, ಜಾತ್ಯತೀತವಾಗಿ, ಜನ ಸಹಭಾಗಿತ್ವದ ಕ್ಷೇತ್ರವಾಗಿ ಬೆಳೆಯಬೇಕು. ಆಹಾರ ಸಮಸ್ಯೆ ನೀಗಿಸುವಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ ಮಹತ್ವದ್ದು. ಉದ್ಯಮಶೀಲತೆ, ಉದ್ಯೋಗ ಮತ್ತು ಕೌಶಲಾಭಿವೃದ್ಧಿಯನ್ನು ಉತ್ತೇಜಿಸುವಲ್ಲಿ, ಸಹಕಾರ ಸಂಸ್ಥೆಗಳ ಕೊಡುಗೆ ಅನನ್ಯ ಎಂದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..**

<><><>